ಓ.ಎಸ್.101/2019 **ಪಿ.ಡಬ್ಲೂಃ 7**

ಸಾಕ್ಷಿಯನ್ನು ದಿಃ **15.10.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ.ಬಿ.ವಕೀಲ**ರಿಂದ**

ಚಿಕ್ಕಬೈರಯ್ಯನವರ ಆಸ್ತಿಗೆ ಹಾಗೂ ಕುಟುಂಬಕ್ಕೆ ಸಂಬಂಧಪಟ್ಟ ವಿಚಾರಗಳು ನನಗೆ ಬಹಳಷ್ಟು ಮಟ್ಟಿಗೆ ತಿಳಿದಿವೆ. ಅವರ ಮನೆಯ ವಿಚಾರಗಳು ಎಲ್ಲವೂ ಗೊತ್ತಿಲ್ಲ ಆದರೆ ನನ್ನಲ್ಲಿ ಹೇಳಿಕೊಂಡಿರುವ ವಿಚಾರಗಳು ತಿಳಿದುಕೊಂಡಿದ್ದೇನೆ. ಮೊದಲು ನಮ್ಮ ಊಗರಿನಲ್ಲಿ ನಾನು ಬಂದಾಗ 10 ಕುಟುಂಬಗಳು ಇದ್ದವು ಈಗ 36 ಕುಟುಂಬಗಳು ಇವೆ. ಈ ಎಲ್ಲಾ 36 ಕುಟುಂಬಗಳ ಸ್ವತ್ತಿನ ಸರ್ವೆ ನಂಬರ್ ಗಳನ್ನು ನಾನು ತಿಳಿದುಕೊಂಡಿಲ್ಲ. 36 ಕುಟುಂಬಗಳಲ್ಲಿ ಯಾವಾಗ ಯಾವಾಗ ಮದುವೆ ಆಗಿವೆ ಎಂದು ನಾನು ತಿಳಿದುಕೊಂಡಿಲ್ಲ, ನಮ್ಮ ಗಮನಕ್ಕೆ ಬಂದಂತಹ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಚಿಕ್ಕಬೈರಯ್ಯನವರ ಹೆಸರಿನಲ್ಲಿ ಸರ್ವೆ ನಂಬರ್ 47/33 ರಲ್ಲಿ 1 ಎಕರೆಗೆ ಖಾತೆ ಇದೆ. ಈ ಚಿಕ್ಕಬೈರಯ್ಯ ಪ್ರತಿವಾದಿಗಳ ತಾತರಾಗಿದ್ದಾರೆ ಎಂದರೆ ಸರಿ ಅವರು ವಾದಿಗಳಿಗೂ ಕೂಡ ತಾತ ಎಂದು ಸ್ವಯಂ ನುಡಿಯುತ್ತಾರೆ. ನಾನು ಹೇಳಿದಂತೆ ಸರ್ವೆ ನಂ. 47/33 ರಲ್ಲಿ ಚಿಕ್ಕಬೈರಯ್ಯನವರಿಗೆ ಜಮೀನಿಲ್ಲ ಆದರೆ ಸೋನಹಳ್ಳಿ ಗ್ರಾಮದ ಸರ್ವೆ ನಂ. 47/36 ರಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಯಲಚನಹಳ್ಳಿ ಗ್ರಾಮದಲ್ಲಿ ಚಿಕ್ಕಬೈರಯ್ಯನವರಿಗೆ 1 ಮನೆ ಇದೆ ಎಂದರೆ ಸರಿ. ಸೋನಹಳ್ಳಿ ಗ್ರಾಮದ ಮೇಲೆ ಹೇಳಿದಂತಹ 1 ಎಕರೆ ಜಮೀನಿನ ಖಾತೆ ಚಿಕ್ಕಬೈರಯ್ಯನವರ ಹೆಸರಿಗೆ ಇದೆ ಎಂದರೆ ಸರಿ. ಈಗ ಹೇಳಿದಂತಹ ಸರ್ವೆ ನಂ. 47/36 ರ ಜಮೀನನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಯಲಚನಹಳ್ಳಿ ಗ್ರಾಮದಲ್ಲಿ ಚಿಕ್ಕಬೈರಯ್ಯನವರ ಹೆಸರನಲ್ಲಿ ಇರುವ ಮನೆಯನ್ನು ಕೂಡ ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ನಿಂಗಮ್ಮ ಮತ್ತು ಚಿಕ್ಕಬೈರಯ್ಯನವರ ಮಗ ಸಿದ್ದಯ್ಯನವರ ವಿವಾಹ ದಿಃ 21.06.1976 ರಂದು ಆಗಿದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಪ್ರತಿವಾದಿಗಳ ತಾಯಿ ಪುಟ್ಟಗೌರಮ್ಮನವರ ಮದುವೆ 1961

ರಲ್ಲಿ ಆಗಿದೆ ನಿಖರ ದಿನಾಂಕ ನೆನಪಿಲ್ಲ. ವಾದಿ 2 ರಿಂದ 4 ರವರ ಮದುವೆ ಯಾವ ಯಾವ ದಿನಾಂಕಂದು ಆಗಿದೆ ಎಂದು ನನಗೆ ನೆನಪಿಲ್ಲ, ಆದರೆ ನಿಂಗಮ್ಮ ನವರ ಮದುವೆ ದಿನಾಂಕ ಅವರ ಲಗ್ನ ಪತ್ರಿಕೆ ನೋಡಿದ್ದರಿಂದ ನೆನಪಿದೆ. ವಾದಿ 2 ರಿಂದ 4 ರವರ ಮದುವೆ ಸಮಯದಲ್ಲಿ ನಾನು ಊರಿನಲ್ಲಿ ಇರಲಿಲ್ಲ ಆದ್ದರಿಂದ ಅವರ ಮದುವೆ ದಿನಾಂಕ ನನಗೆ ನೆನಪಿಲ್ಲ. ಸದರಿ 1 ನೇ ವಾದಿ ನಿಂಗಮ್ಮನವರ ಲಗ್ನ ಪತ್ರಿಕೆ ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಅದು ನನ್ನಲ್ಲಿ ಇಲ್ಲ ಆಗ ಲಗ್ನ ಪತ್ರಿಕೆ ಮಾಡಿಸುವ ರೂಡಿ ಇರಲಿಲ್ಲ ಬಾಯಲ್ಲಿ ಹೇಳಿದ್ದನ್ನು ನಾನು ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಡೈರಿ ಕೂಡ ನನ್ನಲ್ಲಿ ಇಲ್ಲ, ನನ್ನ ಜ್ಞಾಪಕ ಶಕ್ತಿಯಿಂದ ಅವರ ಮದುವೆ ದಿನಾಂಕ ಹೇಳುತ್ತಿದ್ದೇನೆ ಎನ್ನುತ್ತಾರೆ.

ವಾದಿ 2 ರಿಂದ 4 ರವರ ಲಗ್ನ ಪತ್ರಿಕೆಗಳಲ್ಲಿ ಅವರ ತಂದೆಯ ಹೆಸರು ಬಿ. ಸಿದ್ದಯ್ಯ ಎಂದು ಇದೆ ಎಂದರೆ ಸುಳ್ಳು. ನಾನು ಮುಖ್ಯ ವಿಚಾರಣೆಯಲ್ಲಿ ನಿಂಗಮ್ಮ ಮತ್ತು ಸಿದ್ದಯ್ಯ ನವರ ನಡುವೆ ಆಗಿದೆ ಎಂದು ನುಡಿದಿರುವ ವಿವಾಹದ ವಿಚಾರ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳ ತಾಯಿ ಪುಟ್ಟಗೌರಮ್ಮನವರು ದಿಃ 11.10.2014 ರಂದು ಮರಣ ಹೊಂದಿದ್ದಾರೆ. ಸಿದ್ದಯ್ಯನವರು ದಿಃ 11.12.1999 ರಲ್ಲಿ ಮರಣ ಹೊಂದಿದ್ದಾರೆ. ಸಿದ್ದಯ್ಯನವರು ದಿಃ 12.12.1999 ರಂದು ಮರಣ ಹೊಂದಿದ್ದಾರೆ ಎಂದರೆ ಸರಿಯಲ್ಲ. ದಿಃ 11.10.2014 ವರೆಗೂ ಪ್ರತಿವಾದಿಗಳ ತಾಯಿ ಪುಟ್ಟಗೌರಮ್ಮ ಜೀವಂತ ಇದ್ದ ಕಾರಣ ಸಿದ್ದಯ್ಯನವರು ನಿಂಗಮ್ಮನನ್ನು 1976 ರಲ್ಲಿ ವಿವಾಹ ಆಗುವ ಪ್ರಮೇಯ ಇರಲಿಲ್ಲ ಎಂದರೆ ಪುಟ್ಟಗೌರಮ್ಮ ನವರಿಗೆ ಅನಾರೋಗ್ಯವಿದ್ದ ಕಾರಣ ಅವರೆ ಒಪ್ಪಿಸಿ 2 ನೇ ವಿವಾಹ ಮಾಡಿಸಿದ್ದಾರೆ ಎನ್ನುತ್ತಾರೆ. ಪುಟ್ಟಗೌರಮ್ಮ ಸಿದ್ದಯ್ಯನವರಿಗೆ 2 ನೇ ಮದುವೆ ಬಗ್ಗೆ ಯಾವಾಗ ಹೇಳಿದ್ದರು ಎಂದು ನನಗೆ ದಿನಾಂಕ ನೆನಪಿಲ್ಲ ಆ ಬಗ್ಗೆ ಬರವಣಿಗೆ ಆಗಿರುವುದಿಲ್ಲ. ಪುಟ್ಟಗೌರಮ್ಮನವರಿಗೆ ಪ್ರತಿವಾದಿಗಳಾದ 1 ರಿಂದ 4 ರವರು ಮಕ್ಕಳಾಗಿದ್ದು, ಅವರುಗಳ ಪೈಕಿ ದಿಃ 04.02.1966 ರಲ್ಲಿ 1 ನೇ ಪ್ರತಿವಾದಿ, ದಿಃ 05.06.1968 ರಲ್ಲಿ 2 ನೇ ಪ್ರತಿವಾದಿ, ದಿಃ 01.06.1972 ರಲ್ಲಿ 3 ನೇ ಪ್ರತಿವಾದಿ, ಮತ್ತು ದಿಃ

01.06.1975 ರಲ್ಲಿ 4 ನೇ ಪ್ರತಿವಾದಿ ಜನಿಸಿದ್ದು ಆ ಕಾರಣ ಪುಟ್ಟಗೌರಮ್ಮ ಆರೋಗ್ಯದಿಂದಲೆ ಇದ್ದರು ಎಂದರೆ ಸರಿಯಲ್ಲ. ಪುಟ್ಟಗೌರಮ್ಮನವರು ಪ್ರತಿವಾದಿಗಳು ಜನಿಸಿದ ನಂತರ ಸುಮಾರು 39 ವರ್ಷಗಳಕಾಲ ಬದುಕಿದ್ದರು ಮತ್ತು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ವಾದಿಗಳು ಮತ್ತು ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ಪಿ.ಡಬ್ಲ್ಯೂ 2 ರಿಂದ 7 ರವರಾದ ನಾವುಗಳೆಲ್ಲಾ ಷಾಮಿಲಾಗಿ ಪ್ರತಿವಾದಿಗಳ ಸ್ವತ್ತನ್ನು ಲಪಟಾಯಿಸಲು ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆಯ ಹೆಸರು ಸಿದ್ದಯ್ಯ ಆಗಿದ್ದು, ಬಿ. ಸಿದ್ದಯ್ಯ ನವರ ಹೆಸರನ್ನು ದುರುಪದಯೋಗಪಡಿಸಿಕೊಂಡು ಸಿದ್ದಯ್ಯನವರಿಗೆ ಜನಿಸಿದ 2 ರಿಂದ 4 ನೇ ವಾದಿಗಳು ಆಸ್ತಿಗೋಸ್ಕರ ಸುಳ್ಳು ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ವಾದಿಗಳೆಲ್ಲರೂ ಮೈಸೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ವಾದಿಗಳೆಲ್ಲರ ವಿದ್ಯಾಭ್ಯಾಸ ಮೈಸೂರಿನಲ್ಲಿ ಆಗಿದೆ ಎಂದರೆ ನನ್ನ ವಿದಾಭ್ಯಾಸ ಕೂಡ ಮೈಸೂರಿನಲ್ಲಿ ಆಗಿದೆ ಎಂದು ನುಡಿದು, ಅವರನ್ನೆಲ್ಲಾ ಅಜ್ಜಿ –ತಾತ ಕರೆದಕೊಂಡು ಹೋಗಿ ಮೈಸೂರಿನಲ್ಲಿ ಓದಿಸಿದ್ದಾರೆ ಎನ್ನುತ್ತಾರೆ. ವಾದಿಗಳು ಎಲ್ಲೆಲ್ಲಿ ಓದಿದ್ದಾರೆ ಎಂಬ ವಿವರಗಳು ನನಗೆ ಗೊತ್ತಿಲ್ಲ. ದಾವಾ ಐಟಂ 5 ಸರ್ವೆ ನಂ. 21/102 ರಲ್ಲಿ ರ 3 ಎಕರೆ, 6 ಗುಂಟೆ ಪ್ರತಿವಾದಿಗಳ ತಾಯಿಯಾದ ಪುಟ್ಟಗೌರಮ್ಮ ನವರಿಗೆ ಮಂಜೂರಾದ ಆಸ್ತಿಯಾಗಿದೆ ಎಂದರೆ ಸರಿಯಲ್ಲ, ಒಟ್ಟು ಕುಟುಂಬದ ಪರವಾಗಿ ಹಿರಿಯರಾದ ಪುಟ್ಟಗೌರಮ್ಮನ ಹೆಸರಿಗೆ ಆಗಿದೆ ಎನ್ನುತ್ತಾರೆ. ಈ ರೀತಿ ಒಟ್ಟು ಕುಟುಂಬದ ಪರವಾಗಿ ಮಂಜೂರಾಗಿದೆ ಎಂದು ದರಖಾಸ್ತು ಅರ್ಜಿಯಲ್ಲಿ ನಮೂದಿಸಿಲ್ಲ. ದಿಃ 16.07.1999 ರಲ್ಲಿ ಪುಟ್ಟಗೌರಮ್ಮ ನವರ ಹೆಸರಿಗೆ ಸಾಗುವಳಿ ಚೀಟಿ ನೀಡಲಾಗಿದೆ ಎಂದರೆ ಕುಟುಂಬದ ಯಜಮಾನರೆಂದು ನೀಡಲಾಗಿದೆ. ಕಿಮ್ಮತ್ತನ್ನು ಕೂಡ ಪುಟ್ಟಗೌರಮ್ಮನವರ ಹೆಸರಿಗೆ ಪಾವತಿಯಾಗಿದೆ ಎಂದರೆ ವಾದಿಗಳು ಸೇರಿ ಪುಟ್ಟಗೌರಮ್ಮನವರ ಹೆಸರಿಗೆ ಪಾವತಿ ಮಾಡಲಾಗಿದೆ. ನಾನು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೂ ಮೈಸೂರಿನಲ್ಲಿ ಇದ್ದೆ ಎಂದರೆ ಸಾಕ್ಷಿ ನಾನು ಮೈಸೂರಿನಲ್ಲಿ ಹೆಚ್ಚು ಇರುವುದಿಲ್ಲ ನಮ್ಮ ಊರಿನಲ್ಲೆ ಇರುತ್ತೇನೆ ನಮ್ಮ ತಾಯಿಗೆ ನೋಡಬೇಕೆಂದಾಗ ಮೈಸೂರಿಗೆ ಹೋಗಿ ಬರುತ್ತೇನೆ. ನನ್ನ ವೃತ್ತಿ ವ್ಯವಸಾಯ ಎಂದರೆ ಸರಿ.

ನಾನು ಸುಮಾರು 35 ವರ್ಷಗಳ ಹಿಂದೆ ಚಿಕ್ಕಬೈರಯ್ಯನವರ ಮಗ ಸಿದ್ದಯ್ಯನವರ ಜಮೀನಿನಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದೆ. ಈ ರೀತಿ ನಾನು ಕೂಲಿ ಕೆಲಸಕ್ಕೆ ಹೋಗಿದ್ದೆ ಎಂಬ ಬಗ್ಗೆ ದಾಖಲೆ ಇರುವುದಿಲ್ಲ. ನಾನು ಮೈಸೂರು ತಾಲ್ಲೂಕು ಆಫೀಸು ಬಳಿ ಅರ್ಜಿ ಬರೆಯುವ ಕೆಲಸ ಮಾಡುತ್ತೇನೆ ಎಂದರೆ ಆ ಕೆಲಸ ಮಾಡುವುದು ನಿಜ ಆದರೆ ಎಲ್ಲಾ ಸಮಯದಲ್ಲೂ ಹೋಗುವುದಿಲ್ಲ ಈಗಲೂ ಕೂಡ ಸಂದರ್ಭ ಬಂದರೆ ಅರ್ಜಿ ಬರೆಯುವ ಕೆಲಸ ಮಾಡುತ್ತೇನೆ ಎನ್ನುತ್ತಾರೆ. ನಾನು ಎಲ್ಲಾ ಅಧಿಕಾರಿಗಳ ವಿರುದ್ಧ ಆರ್.ಟಿ.ಐ ಕಾಯಿದೆ ಅಡಿ ಅರ್ಜಿಗಳನ್ನು ಬರೆಯುತ್ತಿರುತ್ತೇನೆ. ಮುಖ್ಯ ಮಂತ್ರಿ, ಪ್ರಧಾನ ಮಂತ್ರಿ ಮತ್ತು ರಾಷ್ಟ್ರಪತಿಯವರೆಗೂ ಇಂತಹ ಅರ್ಜಿಗಳನ್ನು ಬರೆಯುತ್ತೇನೆ ಎಂದರೆ ನನಗೆ ತೊಂದರೆ ಆದಾಗ ಬರೆಯುತ್ತೇನೆ. ನಾನು ಬಿ.ಎ ಓದಿ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಯಲಚನಹಳ್ಳಿ ಗ್ರಾಮದ ನನಗೆ ಸರ್ವೆ ನಂ. 1 ರಲ್ಲಿ 4 ಎಕರೆ 20 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ಸಾಕ್ಷಿ 2 ಹೆಕ್ಟರ್ ಮಂಜೂರಾಗಿತ್ತು, 4 ಎಕರೆ 20 ಗುಂಟೆ ಜೊತೆಗೆ 18 ಗುಂಟೆ ಸೇರಿಸಿ 4 ಎಕರೆ 38 ಗುಂಟೆ ಮಂಜೂರು ಮಾಡಿದ್ದಾರೆ ಎನ್ನುತ್ತಾರೆ. ನಾನು 4 ಎಕರೆ, 38 ಗುಂಟೆ ಜಮೀನು ಹೊಂದಿರುವ ದೊಡ್ಡ ಹಿಡುವಳಿದಾರನಾಗಿದ್ದು ನಾನು ಕೂಲಿ ಕೆಲಸಕ್ಕೆ ಹೋಗುವ ಪ್ರಮೇಯ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ, 6 ಎಕರೆ ಇದ್ದವರು ದೊಡ್ಡ ಹಿಡುವಳಿದಾರರು ಎನ್ನುತ್ತಾರೆ.

ಈ ಪ್ರಕರಣ ಹೂಡುವ 2 ವರ್ಷದ ಹಿಂದೆ ಪಾಲಿಗಾಗಿ ಪಂಚಾಯಿತಿ ಆಗಿತ್ತು. ಪಂಚಾಯಿತಿಗಾಗಿ ವಾದಿಯವರು ಅರ್ಜಿ ಕೊಟ್ಟಿದ್ದರು. ನಾನು ಗ್ರಾಮದ ಯಜಮಾನನಲ್ಲ. ನನ್ನನ್ನು ಪಂಚಾಯಿತಿಗಾಗಿ ಬಾಯಿ ಮಾತಿನಲ್ಲಿ ಕರೆದಿದ್ದರು. ಪಂಚಾಯಿತಿಗಾಗಿ ವಾದಿಗಳ ಸೋದರ ಮಾವಂದಿರು, ಅವರ ಚಿಕ್ಕಪ್ಪಂದಿರು, ಅಕ್ಕ-ಪಕ್ಕದ ಗ್ರಾಮದ ಮುಖಂಡರು ಮತ್ತು ನಮ್ಮ ಗ್ರಾಮದ ಮುಖಂಡರನ್ನು ಕೂರಿಸಲಾಗಿತ್ತು. ಈಗ ಹೇಳಿದ ಅಕ್ಕ-ಪಕ್ಕದ ಗ್ರಾಮದ ಮುಖಂಡರ ಹೆಸರು ಹೇಳಲಾಗುವುದಿಲ್ಲ, ನಮ್ಮ ಗ್ರಾಮದ ಮುಖಂಡರ ಹೆಸರು ಹೇಳಬಲ್ಲೆ. ನಾನು ಹೇಳಿದಂತೆ ಯಾವುದೆ ಪಂಚಾಯಿತಿ ಸೇರಿಲ್ಲ, ಸುಳ್ಳು

ಅಂಶಗಳನ್ನು ನಮೂದಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.